

# ಅಸ್ಸಾಂನಲ್ಲಿ ಆರನೇ ಜ್ಯೋತಿರ್ಲಿಂಗ!

## ಕಾಮರೂಪದ ಭೀಮಾಶಂಕರ

ಅಸ್ಸಾಂನ ಭೀಮಾಶಂಕರ ಯಾತ್ರೆ ಭಕ್ತಿಯ ಆರಾಧನೆ ಹಾಗೂ ಪ್ರಾಕೃತಿಕ ಸೌಂದರ್ಯದ ಉಪಾಸನೆಯ ಜುಗಲಬಂದಿ. ನದಿಯ ನೀರಿನಲ್ಲಿ ದಿನದ ಎಲ್ಲ ಕಾಲದಲ್ಲೂ ಮೈದೊಳೆದುಕೊಳುವ ಶಿವನನ್ನು ಮನದುಂಬಿಕೊಳುವುದು ಒಂದು ವಿಶಿಷ್ಟ ಅನುಭವ. ಜ್ಯೋತಿರ್ಲಿಂಗದ ನಂಬಿಕೆಯೊಂದಿಗೆ ಈ ಕ್ಷೇತ್ರ ತಳಕು ಹಾಕಿಕೊಂಡಿರುವುದು ವಿಶೇಷ.

■ ಶ್ರೀನಿವಾಸ ಜೋಕಟ್ಟೆ

ಆಸ್ತಿಕರ ಪಾಲಿಗೆ ಜ್ಯೋತಿರ್ಲಿಂಗಗಳು ಚುಂಬಕ ಕ್ಷೇತ್ರಗಳು. ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ ಪಡೆಯುವುದು ಅನೇಕರ ಪಾಲಿಗೆ ಜೀವಮಾನದ ಕನಸು. ಅಂಥ ಜ್ಯೋತಿರ್ಲಿಂಗವೊಂದು ಅಸ್ಸಾಂನಲ್ಲಿದೆ.

ಅಸ್ಸಾಂನಲ್ಲಿರುವ ಭೀಮಾಶಂಕರ್ ಲಿಂಗವನ್ನು ಆರನೆಯ ಜ್ಯೋತಿರ್ಲಿಂಗ ಎಂದು ಭಕ್ತರು ಆರಾಧಿಸುತ್ತಾರೆ. ಆದರೆ, ಭೀಮಾಶಂಕರನ ಬಗ್ಗೆ ಮಹಾರಾಷ್ಟ್ರದ ಭಕ್ತರು ಹಕ್ಕು ಮಂಡಿಸುತ್ತಾರೆ. ಮಹಾರಾಷ್ಟ್ರದ ಪುಣೆಯಿಂದ ಸುಮಾರು 110 ಕಿ.ಮೀ. ದೂರದಲ್ಲಿರುವ ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿ 'ಭೀಮಾಶಂಕರ ಜ್ಯೋತಿರ್ಲಿಂಗ' ಇದೆ. ಇದನ್ನೇ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಆರನೆಯದು ಎಂದು ನಂಬುವವರು ಇದ್ದಾರೆ.

ಅಸ್ಸಾಂ ರಾಜ್ಯದ ಗುವಾಹಟಿಯ ಜನರು ಮಾತ್ರ ಆರನೇ ಜ್ಯೋತಿರ್ಲಿಂಗ ಭೀಮಾಶಂಕರ್ ಇರುವುದು ನಮ್ಮಲ್ಲಿಯೇ ಎಂದು ಒತ್ತಿ ಹೇಳುತ್ತಾರೆ. ಅಲ್ಲಿನ ಜನರ ಪ್ರಕಾರ, ಮಹಾರಾಷ್ಟ್ರದ ಪುಣೆ ಸಮೀಪದ ಭೀಮಾಶಂಕರ್ ಜ್ಯೋತಿರ್ಲಿಂಗ ಶ್ಲೋಕದ ಅನುಸಾರ ಜ್ಯೋತಿರ್ಲಿಂಗವೆಂದು ಪರಿಗಣಿಸಲು ಸಾಧ್ಯವಿಲ್ಲವಂತೆ. ಅಂದಹಾಗೆ, ಈ ಜ್ಯೋತಿರ್ಲಿಂಗ ಇರುವುದು ಅಸ್ಸಾಂನ ಕಾಮರೂಪ್ ಜಿಲ್ಲೆಯ ಪಾಮೋಹಿ ಸಮೀಪದಲ್ಲಿ.

ಅಸ್ಸಾಂನ ಗುವಾಹಟಿಯಿಂದ 13 ಕಿ.ಮೀ.